- ಜುಲೈ ತಿಂಗಳ ಮುಖಪುಟ ಹಳ್ಳಿಯ ಸೊಗಡನ್ನು ನೆನಪಿಸಿತು. ಲೇಖಕ ಲಕ್ಷ್ಮೀಪತಿ ಕೋಲಾರ ಅವರ ಸಂದರ್ಶನ, 'ಕ್ಲಾಸಿಕ್ಸ್‌ಗಳಿಗೆ ಇದು ಕಾಲವಲ್ಲವೇ?' ಎಂಬ ಪ್ರಶ್ನೆಗೆ ಸಿ.ಎನ್. ರಾಮಚಂದ್ರನ್ ಮತ್ತು ತಾರಿಣಿ ಶುಭದಾಯಿನಿ ಅವರ ಉತ್ತರಗಳು ಇಷ್ಟವಾದವು.

**ದೇವೇಂದ್ರಪ್ಪ, ಹಂಪಿ**

- ಸಂಪಾದಕೀಯ 'ನಾಂದಿಪದ'ದ ಸೇರಿದಂತೆ ವೈಚಾರಿಕ ಬರಹಗಳು, ಚರ್ಚೆಗಳು, ವಸ್ತು ವೈವಿಧ್ಯದಿಂದ ಕೂಡಿದ ಕತೆಗಳು, ಕವಿತೆಗಳು ಗಮನ ಸೆಳೆದವು. 'ಸ್ಮೃತಿಬಿಂಬ'ದಲ್ಲಿ ಪ್ರಕಟವಾದ ಚಿತ್ರ ಸಂಗ್ರಹಯೋಗ್ಯ.

**ಎನ್. ಮಹದೇವ ಚೆನ್ನೈ, ಕಮಲ**
**ಓಂಕಾರಮೂರ್ತಿ, ಬಿ.ಜಿ. ಕೆರೆ**

- ಎಂ.ಆರ್. ಮಂದಾರವಲ್ಲಿ ಅವರ ಕತೆ 'ಲಕ್ ಚಿಪ್ ನ ಜಾವ್ರೋಜಿ' ವಿಭಿನ್ನ ಭಾಷೆ, ಸುಂದರ ನಿರೂಪಣೆಯಿಂದ ಆಪ್ತವೆನಿಸಿತು.

**ಕೆ.ವಿ. ರಾಜಲಕ್ಷ್ಮಿ, ಬೆಂಗಳೂರು**

- ಕಂನಾಡಿಗಾ ನಾರಾಯಣ ಅವರ 'ಅಂತಿಮ ದರ್ಶನ' ಕತೆ ಓದಿದಾಗ ಹೃದಯ ತುಂಬಿ ಬಂತು. ಕತೆ ನಮ್ಮದೇ ಬದುಕಿನ ತಳವನ್ನು ಶೋಧಿಸುವಂತೆ ಮಾಡುತ್ತದೆ.

**ವೆಂಕಟೇಶ ಎಂ.ಎ., ದಾವಣಗೆರೆ**
**ಕಲ್ಲೇಶ್ ಕುಂಬಾರ್, ಹಾರೂಗೇರಿ**

- ಪ್ರೀತಿ ನಾಗರಾಜ ಅವರ 'ಪೂರ್ಣವಿರಾಮಕ್ಕೆ ಮುನ್ನ...' ಪ್ರಬಂಧ ವಿಶಿಷ್ಟವೂ ಉಲ್ಲೇಖಾರ್ಹವೂ ಸಂಗ್ರಹಯೋಗ್ಯವೂ ಆಗಿದೆ. ಸಾವಿಗೇ ನಗುಮುಖ ತೋರುವ ಅತ್ಯಂತ ಲವಲವಿಕೆಯ ಬರಹವಿದು. ನಮ್ಮ ದಾವಣಗೆರೆಯ ದೇಸಿ ನುಡಿಗಟ್ಟುಗಳು ಬರಹವನ್ನು ಇನ್ನಷ್ಟು ಆಪ್ತವಾಗಿಸುತ್ತವೆ.




**ಎನ್. ಪ್ರಕಾಶ್, ಮೈಸೂರು**

- ವಾಸುದೇವ ಮೂರ್ತಿ ಪಿ. ಅವರ 'ಪಾತಾಳಗರಡಿ' ಪತ್ತೆದಾರಿ ಕತೆ ತುಂಬಾ ಕುತೂಹಲದಿಂದ ಕೂಡಿದ್ದು, ಕೊನೆಯವರೆಗೂ ಓದಿಸಿಕೊಂಡು ಹೋಯಿತು. 'ಕ್ಲಾಸಿಕ್ಸ್‌ಗಳಿಗೆ ಇದು ಕಾಲವಲ್ಲವೇ?' – ಕುರಿತ ಲೇಖನಗಳು ಇಂದಿನ ಸಾಹಿತ್ಯದ ಚಿತ್ರಣ ನೀಡಿದವು.

**ದಯಾನಂದ ಅಂಜಿಕ್ಕಾರ್, ಸುಳ್ಯ**

- 'ನವಿಲುಗನ್ನಡಿ'ಯಲ್ಲಿ ಸುಧಾ ಚಿದಾನಂದಗೌಡ ಅವರ 'ಅಂತರಂಗದ ಆಯಾಮ' ಕತೆಯ ಮರು ಓದು ಸಂತೋಷ ನೀಡಿತು. ದಸ್ತಗೀರಸಾಬ್ ದಿನ್ನಿ ಅವರ ಗಜಲ್ , 'ನನ್ನ ಓದು' ಅಂಕಣದಲ್ಲಿನ ಪುಸ್ತಕ ವಿಮರ್ಶೆ ಇಷ್ಟವಾದವು.

**ಗುರುಮೂರ್ತಿ ಪೆಂಡಕೂರ, ಬೆಂಗಳೂರು**

- ಸವಿತಾ ಪ್ರಭಾಕರ್ ಅವರ ಚಿಕ್ಕ–ಚೊಕ್ಕ 'ಸೋಮಾರಿ ಸೊಸೆಯರು' (ಚಿಣ್ಣರ ಚಾವಡಿ) ಕತೆಯಲ್ಲಿ ಇಂದಿನ ಆಧುನಿಕ ಸೊಸೆಯಂದಿರ ನಿಜ ಸ್ವಭಾವ ಚಿತ್ರಿತವಾಗಿದೆ.

**ಕೆ.ಆರ್. ಪಾರ್ವತಿ, ವಿಜಯಪುರ**